

ಕಲೋಸಿಯಂನ ಒಳಭಾಗ

ವಿರಾಟ್ ರಚನೆಗಳ ಮಟ್ಟಿಗೂ ಈ ವಿಸ್ಮಯ–ವಿಷಾದಗಳ ದ್ವಂದ್ವಭಾವ ಕಾಡುತ್ತದೆ. ಈ ಭಾವ ಆಗಸಚುಂಬಿ ಕಟ್ಟಡ, ರಾಜಕೀಯ ನೇತಾರರ ಪ್ರತಿಮೆ, ಬೃಹತ್ ಕಾರ್ಖಾನೆ, ದೊಡ್ಡ ಮಾಲ್ ಹಾಗೂ ಮಹಾನಗರಗಳ ಮಟ್ಟಿಗೂ ನಿಜವೇ. ಬಹುತೇಕ ಈ ವಿರಾಟ್ ರಚನೆಗಳ ಹಿಂದೆ ಧರ್ಮ ರಾಜಕಾರಣ ವಾಣಿಜ್ಯ ಹಾಗೂ ಯುದ್ಧಸಂಸ್ಕೃತಿಗಳಿರುತ್ತವೆ. ಇವುಗಳ ಚೆಲುವುಪ್ರಜ್ಞೆ, ಇಂಜಿನಿಯರಿಂಗ್ ಕುಶಲತೆ ಹಾಗೂ ಕಟ್ಟಿಸಿದವರ ಮಹತ್ವಾಕಾಂಕ್ಷೆಗಳಿಗೆ, ಗುಲಾಮರ ಬಿಟ್ಟಿದುಡಿತವೂ ಪ್ರಭುತ್ವಹಿಂಸೆಯ ಕಲೆಗಳೂ ಅಂಟಿರುತ್ತವೆ. ಆದರೆ ಈ ವೈರುಧ್ಯವು ನೈಸರ್ಗಿಕ ಬೃಹತ್ತುಗಳಾದ ಪರ್ವತ ನದಿ ಕಣಿವೆಗಳಲ್ಲಿ ಅಷ್ಟಾಗಿರುವುದಿಲ್ಲ. ಬುಡಕಟ್ಟು ಜನ ಪರ್ವತ ಕಣಿವೆ ಹೊಳೆಯಂತಹ ಮಹಾನ್ ಪ್ರಾಕೃತಿಕ ರಚನೆಗಳನ್ನು ಆರಾಧಿಸುತ್ತಲೇ, ಅನ್ಯರಿಗೆ ಕೇಡೆಸಗದ ಸರಳತೆಯನ್ನೂ ಸಾಧಿಸಿರುತ್ತಾರೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗರು ದೈವೀಕರಿಸಿರುವ ದೊಡ್ಡಸಂಪಿಗೆ ಮರ ಇದಕ್ಕೆ ನಿದರ್ಶನ.



ಸರ್ಪದೊಡನೆ ವೀರನ ಸೆಣಸಾಟ

ಗ್ರೀಕ್ರೋ–ರೋಮನ್ ಚಕ್ರವರ್ತಿಗಳ ಮಹತ್ವಾಕಾಂಕ್ಷೆಯ ಪ್ರತಿಬಿಂಬಗಳಂತಿರುವ ಈ ಅರಮನೆ, ಕೋಟೆ, ದೇವಮಂದಿರ, ಕಲೋಸಿಯಂಗಳು, ಯುದ್ಧ ಸಂಪತ್ತಿನ ಕುಮ್ಮಕ್ಕಿನಿಂದ ನಿರ್ಮಾಣಗೊಂಡವು. ರೋಮಿನ ಬಹುತೇಕ ಚೌಕಗಳಲ್ಲಿ ಅಶ್ವಾರೋಹಿ ಶಿಲ್ಪಗಳನ್ನು ನಿಲ್ಲಿಸಲಾಗಿದೆ. ಅಲ್ಲಿನ ಶಿಲ್ಪಗಳಲ್ಲಿ ದಂಡಯಾತ್ರೆಯ, ರಥವೋಡಿಸುವ, ಅಶ್ವಾರೋಹಿಗಳ, ಶತ್ರುವಧೆಯ ದೃಶ್ಯಗಳು ಕಿಕ್ಕಿರಿದಿವೆ. ಒಂದು ಭಿತ್ತಿಚಿತ್ರದಲ್ಲಿ ರಾಜನ ಆಸ್ಥಾನದಲ್ಲಿ ಗೂಳಿಯಂತಹ ಒಬ್ಬ ದಾಂಢಿಗನ ಶಿರಚ್ಛೇದದ ಪ್ರಸಂಗವಿದೆ. ಇವೆಲ್ಲವೂ ಯುದ್ಧಸಂಸ್ಕೃತಿಯನ್ನು ಮೌಲ್ಯೀಕರಿಸುವ ಪೌರುಷವಾದಿ ಸಮಾಜದ ಪ್ರತಿಬಿಂಬಗಳು. ಕಾಳಗಗಳ ಗರ್ಭದಲ್ಲಿ ರೂಪುತಳೆವ ಎಲ್ಲ ಸಾಮ್ರಾಜ್ಯಗಳು ರಣಶೌರ್ಯವನ್ನು ವೈಭವಿಸುತ್ತವೆ; ತಮ್ಮದು ‘ವೀರಯುಗ’ವೆಂದು ಕರೆದುಕೊಳ್ಳುತ್ತವೆ; ಗಂಡುತನ, ದೈಹಿಕದೃಢತೆ, ಸಾಹಸಪ್ರವೃತ್ತಿ, ಯುದ್ಧಸೂರೆ, ರಣರಂಗದ ಹಿಂಸೆ, ಸಾವುಗಳನ್ನು ಆದರ್ಶಮೌಲ್ಯಗಳಾಗಿ ಬಿಂಬಿಸುತ್ತವೆ. ಇವುಗಳ ಭರಾಟೆಯಲ್ಲಿ ಮಹಿಳೆಯರೂ ದೈಹಿಕ ದುರ್ಬಲರೂ ಮುದುಕರೂ ಹೇಡಿತನದ ಪ್ರತೀಕಗಳಾಗಿರುವರು. ಯುದ್ಧವನ್ನು ವಸ್ತುವಾಗಿಕೊಂಡು ಹುಟ್ಟಿದ ಗ್ರೀಕ್–ರೋಮನ್ ಮಹಾಕಾವ್ಯಗಳು ಇಂತಹ ಯುಗಧರ್ಮದ ಕನ್ನಡಿಗಳಂತಿವೆ. ‘ವಿಕ್ರಮ’, ‘ಸಾಹಸ’, ‘ವಿಜಯ’ಗಳು ಪ್ರಧಾನವಾಗಿರುವ ಪಂಪ–ರನ್ನರ ‘ವಿಕ್ರಮಾರ್ಜುನ ವಿಜಯ’, ‘ಸಾಹಸಭೀಮ ವಿಜಯ’ಗಳೂ ಇದೇ ಸಾಲಿನವು.

ಯುದ್ಧಸಂಸ್ಕೃತಿಯ ಭಾಗವಾಗಿ ಕಾಮವೂ ಬರುತ್ತದೆ. ಈ ಹಿನ್ನೆಲೆಯಲ್ಲಿ ರೋಮ್, ಗುಂಗುರು ಕೂದಲುಳ್ಳ, ಹುರಿಗೊಂಡ ಸ್ನಾಯುಗಳನ್ನು ಪ್ರದರ್ಶಿಸುವ ಗಂಡಸರ ಮತ್ತು ತೆರೆದೆದೆಯ ಸ್ತ್ರೀಯರ ಬೆತ್ತಲೆಶಿಲ್ಪಗಳಿಂದ ತುಂಬಿರುವುದನ್ನು ಗಮನಿಸಬಹುದು. ಅರೆನಗ್ನ ಪುರುಷರ ಜತೆಗಿರುವ ಹಾವು, ಸಿಂಹ, ಕುದುರೆಗಳು ಕೂಡ ಅವರ ರಣಗಲಿತನ ಮತ್ತು ಲೈಂಗಿಕ ಕಸುವನ್ನು ಸೂಚಿಸುವಂತಿವೆ. ರೋಮಿನ ಪ್ರಧಾನ ಚೌಕವೊಂದರಲ್ಲಿ ಬೃಹದಾಕೃತಿಯ ಪುರುಷನೊಬ್ಬ ಕಾಲುಚಾಚಿ ವಿರಾಮಭಂಗಿಯಲ್ಲಿ ಕೂತಿರುವ ಶಿಲ್ಪವಿದೆ. ಆತನ ತೊಡೆಯೊಳಗಿಂದ ತಾವರೆ ಮೊಗ್ಗಿನಂತಹ ಅಲಂಕೃತ ಆಕೃತಿಯೊಂದು ಮೇಲೆದ್ದಿದೆ. ಅದನ್ನಾತ ಮೋಹಿತನಾಗಿ ನೋಡುತ್ತಿದ್ದಾನೆ. ಆದರೆ ನಮ್ಮಲ್ಲಿರುವಂತೆ ರತಿನಿರತ ಶಿಲ್ಪಗಳು ರೋಮ್ ಶಿಲ್ಪ–ಚಿತ್ರಕಲೆಯಲ್ಲಿ ಕಡಿಮೆ. ನಮ್ಮಲ್ಲಿ ನಗ್ನತೆ ಮತ್ತು ಬೃಹದಾಕಾರಗಳು ಅನುರಕ್ತಿಯಿಂದ ಸನ್ಯಾಸಕ್ಕೂ ಯುದ್ಧಗಳಿಂದ ಶಾಂತಿಗೂ ಹೊರಳುತ್ತವೆ. ಬೆಳಗೊಳದ ಬಾಹುಬಲಿ ಇದಕ್ಕೆ ನಿದರ್ಶನ. ಜಗತ್ತಿನ ಎತ್ತರದ ಶಿಲ್ಪಗಳಲ್ಲಿ ಹೆಚ್ಚಿನವು ಬುದ್ಧನವು. ಯುದ್ಧಸಂಸ್ಕೃತಿಯನ್ನು ನಿರಾಕರಿಸಿದ, ವಿರಕ್ತವಾದಿಯೂ ಭಿಕ್ಷೆಯಿಂದ ಸರಳವಾಗಿ ಬದುಕಿದ ಮತ್ತು ವಿಗ್ರಹಾರಾಧನೆ ಒಪ್ಪದ ಬುದ್ಧ, ಬೌದ್ಧದೇಶಗಳಲ್ಲಿ ಬೃಹದಾಕೃತಿಯಲ್ಲಿ ಮೈದೋರುತ್ತ ಹೋದದ್ದು ಒಂದು ವೈರುಧ್ಯ.

ಯುದ್ಧ, ಸಾಮ್ರಾಜ್ಯವಿಸ್ತರಣೆ ಹಾಗೂ ಸಂಪತ್ತುಗಳು, ಆಳುವವರ ಬದುಕನ್ನು ಯಾರಾದರೂ ಒಂದುದಿನ ಕಬ್ಜಾ ಮಾಡಬಹುದೆಂಬ ಆತಂಕದಲ್ಲೇ ಇಡುತ್ತವೆ. ಈ ಅಭದ್ರತೆಯು ಮತ್ತಷ್ಟು ಕೆಚ್ಚಿಗೂ ತೀವ್ರವಾದ ಭೋಗಾಸಕ್ತಿಗೂ ದೂಡುತ್ತದೆ. ಗ್ರೀಕ್ರೋ–ರೋಮನ್ ಅವಶೇಷಗಳಲ್ಲಿರುವ ಪುರಾಣದ ಕೆಲವು ದೇವತೆಗಳು ಮಹಾ ಲೋಲುಪರು; ಪ್ರಾಣಿ–ಪಕ್ಷಿ ರೂಪದಾಳಿ ಭೂಮಿಗಿಳಿದು ಭೋಗಿಸುವರು. ಭೋಗದ ಭಾಗವಾಗಿಯೇ ಆಪತ್ತುಗಳನ್ನೂ ಮುಖಾಬಿಲೆ ಮಾಡುವವರು. ‘ರಣದಿಂದ ಮರಳಿದರೆ ಲಕ್ಷ್ಮಿ, ಮಡಿದರೆ ಸ್ವರ್ಗದ ಅಪ್ಸರೆಯರು’ ಎಂಬ ಆಮಿಷವು, ನಮ್ಮ ಪ್ರಾಚೀನ ಯುದ್ಧಸ್ಮಾರಕಗಳಲ್ಲಿ ಮತ್ತೆಮತ್ತೆ ಕಾಣಿಸುವುದನ್ನು ಸ್ಮರಿಸಬಹುದು. ಇಲ್ಲಿ ಸಂಪತ್ತು ಮತ್ತು ಭೋಗ ಎರಡನ್ನೂ ಸ್ತ್ರೀರೂಪದಲ್ಲಿಯೇ ಕಂಡರಿಸಿರುವುದು ಗಮನಾರ್ಹ.